Email gardendepartment[illegible]@gmail.com
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

(4ನೇ ಆವೃತ್ತಿಯ ನ್ಯಾಕ್ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ
(ಎನ್.ಐ.ಆರ್.ಎಫ್.-2023: ವಿಶ್ವವಿದ್ಯಾನಿಲಯ ವರ್ಗದಲ್ಲಿ 44ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 71ನೇ ಸ್ಥಾನ

ತೋಟಗಾರಿಕೆ ವಿಭಾಗ
ಮಾನಸಗಂಗೋತ್ರಿ, ಮೈಸೂರು-570006

ನಂ.ಯುಜಿಡಿ/ 362 /2023-24

ದಿನಾಂಕ: 10.01.2024

## ಪ್ರಕಟಣೆ

**ವಿಷಯ:- ದಿನಾಂಕ 19.01.2024ರಂದು ವಿಭಾಗದ ಸಪೋಟ, ಸೀಬೆ ಮತ್ತು ಸೀತಾಫಲ ಫಸಲುಗಳ ಟೆಂಡರ್ ಕಂ. ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ**

---

ಸಮಸ್ತ ಜನಗಳಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗದ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ **2023-24ನೇ ಸಾಲಿನ ಸಪೋಟ, ಸೀಬೆ ಮತ್ತು ಸೀತಾಫಲ ಫಸಲುಗಳ ಟೆಂಡರ್ ಕಂ ಬಹಿರಂಗ ಹರಾಜು** ಪ್ರಕ್ರಿಯೆ ದಿನಾಂಕ **19.01.2024ರಂದು** ಬೆಳಗ್ಗೆ 11-00 ಗಂಟೆಗೆ ಮಾನಸಗಂಗೋತ್ರಿಯಲ್ಲಿರುವ ನರ್ಸರಿ ತೋಟದಲ್ಲಿ ಪ್ರಾರಂಭವಾಗುತ್ತದೆ. ಸದರಿ **ಟೆಂಡರ್ ಕಂ ಬಹಿರಂಗ ಹರಾಜು** ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂಗಡ ಹಣ ರೂ.**10,000/-(ಹತ್ತು** ಸಾವಿರ ರೂಪಾಯಿ)ಗಳ ನಗದನ್ನು ಠೇವಣಿಯನ್ನಾಗಿ ಹರಾಜು ಸ್ಥಳದಲ್ಲಿ ಪಾವತಿಸಿದ ನಂತರವೇ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಬಿಡ್ ಮಾಡಬಹುದು. **ಟೆಂಡರ್ ಕಂ ಬಹಿರಂಗ** ಹರಾಜಿನ ಯಶಸ್ವಿ ಬಿಡ್‌ದಾರರು ಪೂರ್ತಾ ಹಣವನ್ನು ಸ್ಥಳದಲ್ಲೇ ಪಾವತಿಸತಕ್ಕದ್ದು.

1. ಸಪೋಟ ಫಸಲಿನ ಮರ 525
2. ಸೀಬೆ ಫಸಲಿನ ಮರ 230
3. ಸೀತಾಫಲ ಫಸಲಿನ ಮರ 80

ಈ ಬಗ್ಗೆ ಹೆಚ್ಚಿನ ವಿವರಗಳಿಗೆ : ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕೆ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ:0821-2419310 ಮತ್ತು ಮೊಬೈಲ್ ಸಂಖ್ಯೆ: 9844398323

ಸಹಾಯಕ ನಿರ್ದೇಶಕ

**ಸಹಾಯಕ ನಿರ್ದೇಶಕ**
**ತೋಟಗಾರಿಕೆ ವಿಭಾಗ**
**ಮೈಸೂರು ವಿಶ್ವವಿದ್ಯಾನಿಲಯ**
**ಮೈಸೂರು-570 006**

Email:gardendepartment.uom@gmail.com
www.uni-mysore.ac.in

ಮೈಸೂರು ವಿಶ್ವವಿದ್ಯಾನಿಲಯ

(4ನೇ ಆವೃತ್ತಿಯ ನ್ಯಾಕ್ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ
(ಎನ್.ಐ.ಆರ್.ಎಫ್.-2023: ವಿಶ್ವವಿದ್ಯಾನಿಲಯ ವರ್ಗದಲ್ಲಿ 44ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 71ನೇ ಸ್ಥಾನ

ತೋಟಗಾರಿಕೆ ವಿಭಾಗ
ಮಾನಸಗಂಗೋತ್ರಿ, ಮೈಸೂರು-570006

---

## 2023-24ನೇ ಸಾಲಿನ ಸಪೋಟ, ಸೀಬೆ ಮತ್ತು ಸೀತಾಫಲ ಫಸಲುಗಳ ಟೆಂಡರ್ ಕಂ ಬಹಿರಂಗ ಹರಾಜಿನ 'ಷರತ್ತುಗಳು'

1. ಸಪೋಟ, ಸೀಬೆ ಮತ್ತು ಸೀತಾಫಲ ಫಸಲುಗಳ ಟೆಂಡರ್ ಕಂ ಬಹಿರಂಗ ಹರಾಜು ಜರುಗುವ ಮುಂಚಿತವಾಗಿ ಬಿಡ್‌ದಾರರು ರೂ.10,000/-[ಹತ್ತು ಸಾವಿರ ರೂಪಾಯಿ] ಇ.ಎಂ.ಡಿ. ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು.

2. ಹರಾಜಿನಲ್ಲಿ ಅಂತಿಮ ಬಿಡ್ ಮಾಡಿದವರು ಸ್ಥಳದಲ್ಲೇ ಪೂರ್ತಾ ಹಣವನ್ನು ಸಂದಾಯ ಮಾಡತಕ್ಕದ್ದು.

3. ಸದರಿ ಹರಾಜಿಗೆ ಸಂಬಂಧಪಟ್ಟ ಮರಗಳ ಫಸಲಗಳನ್ನು ಕೀಳುವಾಗ ಯಾವುದೇ ಮರಗಳಿಗಾಗಲೀ ಅಥವಾ ವಿಶ್ವವಿದ್ಯಾನಿಲಯದ ಇನ್ನಾವುದೇ ಆಸ್ತಿಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸುವುದು.

4. ಹರಾಜಿನ ನಡಾವಳಿಗಳು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರ ಅಂಗೀಕಾರಕ್ಕೆ ಒಳಪಟ್ಟಿರುತ್ತದೆ.

5. ಬಹಿರಂಗ ಹರಾಜಿನ ನಿಯಮಗಳು ಉಲ್ಲಂಘನೆಯಾದಲ್ಲಿ ಹರಾಜನ್ನು ರದ್ದು ಮಾಡುವ ಮತ್ತು ಮರು ವಿಲೇವಾರಿ ಮಾಡುವುದು ವಿಶ್ವವಿದ್ಯಾನಿಲಯದ ಕುಲಸಚಿವರ ಆದೇಶಕ್ಕೆ ಒಳಪಟ್ಟಿರುತ್ತದೆ.

6. ಹರಾಜಿನಲ್ಲಿ ಫಸಲುಗಳನ್ನು ತೆಗೆದುಕೊಂಡವರು, ಅನುಮತಿ ಪಡೆದ ನಂತರ ಸದರಿ ಬಿಡ್ ಮಾಡಿದ ಫಸಲುಗಳು ಹರಾಜು ಜರುಗಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಮಾತ್ರ ಒಳಪಟ್ಟಿರುತ್ತದೆ.

7. ಯಶಸ್ವಿ ಬಿಡ್‌ದಾರರು ಆಧಾರ 'ಗುರುತಿನ ಚೀಟಿ' ಯನ್ನು ನೀಡತಕ್ಕದ್ದು.

8. ಯಶಸ್ವಿ ಬಿಡ್ಡುದಾರರು ರೂ.200/-ಗಳ ಛಾಪಕಾಗದದಲ್ಲಿ ಕರಾರು ಒಪ್ಪಂದವನ್ನು ಮಾಡಿ ಕೊಡುವುದು. ಮತ್ತು ಶೇಕಡ 5%ರಷ್ಟು ಬಿಡ್‌ನ ಭದ್ರತಾ ಠೇವಣಿಯ ಮೊತ್ತವನ್ನು ಮುಂಗಡವಾಗಿ ಪಾವತಿಸುವುದು. ಅವಧಿ ಮುಗಿದ ನಂತರ ಮರುಪಾವತಿ ಮಾಡಲಾಗುವುದು.

9. ಬಿಡ್‌ದಾರರು ಕಪ್ಪುಪಟ್ಟಿಯಲ್ಲಿ ನಮೂದಾಗಿರಬಾರದು

10. ಹೆಚ್ಚಿನ ವಿವರಗಳಿಗೆ:- ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ಇಲ್ಲಿ (ಕಚೇರಿ ವೇಳೆಯಲ್ಲಿ) ಖುದ್ದಾಗಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0821-2419310 ಮತ್ತು ಮೊಬೈಲ್ ಸಂಖ್ಯೆ: 9844398323

-=-0-=-

ಸಹಾಯಕ ನಿರ್ದೇಶಕ
ತೋಟಗಾರಿಕೆ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು-570 006